ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.

ಸಂಖ್ಯೆ:ಪಪೂಶಿಇ/ಶೈಶಾ-04/ಸಾಂ.ಸ್ಪ-1/2019-20 ದಿನಾಂಕ: 27-09-2019.

## ಸುತ್ತೋಲೆ

ವಿಷಯ: 2019-20ನೇ ಶೈಕ್ಷಣಿಕ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣದ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಸ್ಪರ್ಧೆಗಳನ್ನು ನಡೆಸುವ ಕುರಿತು.

*****

ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಜಂಟಿ ಆಶ್ರಯದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಾಗುತ್ತಿದೆ. ಈ ಪಠ್ಯೇತರ ಚಟುವಟಿಕೆಗಳನ್ನು ಪ್ರಾರಂಭಿಸಿದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಪ್ರತಿಭಾವಂತರನ್ನು ಗುರುತಿಸಲು ಸಾಧ್ಯವಾಗಿದೆ.

ಈ ಶೈಕ್ಷಣಿಕ ಸಾಲಿನಲ್ಲೂ ಸಹ ಪ್ರಥಮ ಹಾಗೂ ದ್ವಿತೀಯ ಪಿಯುಸಿ ತರಗತಿಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ಹಿಂದಿನ ವರ್ಷಗಳಲ್ಲಿ ನಡೆಸಿದಂತೆ ಈ ಕೆಳಕಂಡ 11 ಸ್ಪರ್ಧೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ.

ಸ್ಪರ್ಧೆಗಳ ವಿವರ:

1. ರಸಪ್ರಶ್ನೆ(ಸಾಮಾನ್ಯ ಜ್ಞಾನ)
2. ಪ್ರಬಂಧ ಸ್ಪರ್ಧೆ (ಇಂಗ್ಲೀಷ್ ಭಾಷೆ)
3. ಪ್ರಬಂಧ ಸ್ಪರ್ಧೆ (ಕನ್ನಡ ಭಾಷೆ)
4. ಚರ್ಚಾ ಸ್ಪರ್ಧೆ (ಇಂಗ್ಲೀಷ್ ಭಾಷೆ)
5. ಚರ್ಚಾ ಸ್ಪರ್ಧೆ (ಕನ್ನಡ ಭಾಷೆ)
6. ಏಕಪಾತ್ರಾಭಿನಯ
7. ಭಾವಗೀತೆ
8. ಜಾನಪದ ಗೀತೆ
9. ಚಿತ್ರಕಲೆ
10. ಭಕ್ತಿಗೀತೆ
11. ಆಶುಭಾಷಣ

ಈ ಎಲ್ಲಾ ಸ್ಪರ್ಧೆಗಳನ್ನು ಎರಡು ಹಂತದಲ್ಲಿ ನಡಸಲಾಗುವುದು. ಮೊದಲು ಕಾಲೇಜು ಮಟ್ಟದಲ್ಲಿ ನಂತರ ಜಿಲ್ಲಾ ಮಟ್ಟದಲ್ಲಿ ನಡೆಸುವುದು. ಕಾಲೇಜು ಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ವಿಜೇತರ ಹೆಸರನ್ನು ಸಿದ್ಧಪಡಿಸಿಕೊಂಡಿರಲು ಪ್ರಾಂಶುಪಾಲರುಗಳಿಗೆ ದಾಖಲಾತಿ ಮತ್ತು ಇತರೆ ಚಟುವಟಿಕೆಗಳ ಕೈಪಿಡಿ 2019-20ರಲ್ಲಿ ಸೂಚಿಸಲಾಗಿತ್ತು. ಅದರಂತೆ ಕಾಲೇಜು ಮಟ್ಟದ ಸ್ಪರ್ಧೆಗಳು ಈ ವೇಳೆಗೆ ಮುಗಿದಿರುತ್ತವೆ ಎಂದು ಭಾವಿಸಲಾಗಿದೆ. ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದವರು ಜಿಲ್ಲಾ ಮಟ್ಟದ ಸ್ಪರ್ಧೆಗೆ ಅರ್ಹರಾಗುತ್ತಾರೆ. ಅವರ ಹೆಸರನ್ನು ಪ್ರಮಾಣೀಕರಿಸಿ ಗುರುತಿನ ಪತ್ರದೊಂದಿಗೆ ಜಿಲ್ಲಾ ಮಟ್ಟದ ಸ್ಪರ್ಧೆ ನಡೆಸಲು ಅನುಕೂಲವಾಗುವಂತೆ ಆಯಾ ಜಿಲ್ಲಾ ಉಪ ನಿರ್ದೇಶಕರು ಜಿಲ್ಲೆಯ ಪ್ರಾಂಶುಪಾಲರಿಗೆ ಸುತ್ತೋಲೆಯನ್ನು ಕಳುಹಿಸಲು ಕ್ರಮ ತೆಗೆದುಕೊಳ್ಳುವುದು.

ಜಿಲ್ಲಾ ಮಟ್ಟದ ಸ್ಪರ್ಧೆಗಳು:

ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು 32 ಶೈಕ್ಷಣಿಕ ಜಿಲ್ಲೆಗಳಲ್ಲಿ ನಡೆಸಲಾಗುವುದು.

ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು ತಮ್ಮ ಅಧ್ಯಕ್ಷತೆಯಲ್ಲಿ ಒಂದು ಪರಿಣಿತರ ಸಮಿತಿಯನ್ನು ರಚಿಸಿಕೊಂಡು ಪ್ರಾಂಶುಪಾಲರ ಸಂಘ, ಉಪನ್ಯಾಸಕರ ಸಂಘ, ಖಾಸಗಿ ಕಾಲೇಜುಗಳ ಸಹಕಾರದೊಂದಿಗೆ ಜಿಲ್ಲಾ ಕೇಂದ್ರದಲ್ಲಿ ಅಥವಾ ಆ ಜಿಲ್ಲೆಯ ಎಲ್ಲರಿಗೂ ಅನುಕೂಲವಾಗುವ ಸ್ಥಳದಲ್ಲಿ ನಡಸಬೇಕು. ಸ್ಪರ್ಧಿಗಳು ಮತ್ತು ಉಪನ್ಯಾಸಕರು ಜಿಲ್ಲಾ ಮಟ್ಟದ ಸ್ಪರ್ಧೆಗೆ

ಭಾಗವಹಿಸಲು ಬಂದಾಗ ಪ್ರಯಾಣ ವೆಚ್ಚವನ್ನು ಸಂಬಂಧಪಟ್ಟ ಕಾಲೇಜಿನವರು ಕ್ರೀಡಾ ಮತ್ತು ವಾಚನಾಲಯದ ನಿಧಿಯಿಂದ ಭರಿಸಲು ತಿಳಿಸುವುದು. 11 ಸ್ಪರ್ಧೆಗಳು ರಸಪ್ರಶ್ನೆಯಲ್ಲಿ ಇಬ್ಬರು ವಿದ್ಯಾರ್ಥಿ ಇರುವುದರಿಂದ ಒಟ್ಟು 12 ಬಹುಮಾನಗಳನ್ನು ಜಿಲ್ಲಾ ಮಟ್ಟದ ಹಂತದಲ್ಲಿ ಈ ಕೆಳಕಂಡಂತೆ ನಗದು ರೂಪದಲ್ಲಿ ನೀಡಲು ಸೂಚಿಸಲಾಗಿದೆ.

**ಜಿಲ್ಲಾ ಮಟ್ಟದ ಸ್ಪರ್ಧೆಗಳಿಗೆ ಬಹುಮಾನಕ್ಕಾಗಿ**

| | ಪ್ರಥಮ ಪಿಯುಸಿಗೆ | ದ್ವಿತೀಯ ಪಿಯುಸಿಗೆ | ಒಟ್ಟು |
|---|---|---|---|
| ಪ್ರಥಮ ಬಹುಮಾನ | 1500 x12 = 18,000/- | 1500x12 = 18,000/- | 36,000/- |
| ದ್ವಿತೀಯ ಬಹುಮಾನ | 1200 x12 = 14,400/- | 1200x12 = 14,400/- | 28,800/- |
| ತೃತೀಯ ಬಹುಮಾನ | 900 x12= 10,800/- | 900x12= 10,800/- | 21,600/- |
| ಸಂಘಟನಾ ವೆಚ್ಚ | ಪ್ರತಿ ಜಿಲ್ಲೆಗೆ 10,000/- | ----- | 10,000/- |
| | | ಒಟ್ಟು | **96,400/-** |

**ಈ ರೀತಿಯಲ್ಲಿ 32 ಜಿಲ್ಲೆಗಳಿಗೆ ತಗಲುವ ವೆಚ್ಚ 96,400 x 32 = 30,84,800/-**

ಬಹುಮಾನ ವಿಜೇತರಿಗೆ ಹಣವನ್ನು ವಿತರಿಸಿ ಸ್ವೀಕೃತಿಯನ್ನು ಪಡೆದುಕೊಳ್ಳಬೇಕು. ಈ ರೀತಿಯಲ್ಲಿ ಸಹಿ ಪಡೆದ ಮೂಲ ಪ್ರತಿಯನ್ನು ಸಂಘಟನಾ ವೆಚ್ಚದ ಮೂಲ ಬಿಲ್ಲನ್ನು ಜಿಲ್ಲೆಯಲ್ಲೇ ಕಾಯ್ದಿರಿಸಿಕೊಳ್ಳಬೇಕು ಹಾಗೂ ದ್ವಿಪ್ರತಿಯನ್ನು ಪರಿಶೀಲನೆಗೆ ಸಹಾಯಕ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–12 ವಿಳಾಸಕ್ಕೆ ದಿನಾಂಕ: 30–11–2019ರ ಒಳಗಾಗಿ ತಪ್ಪದೇ ಬಳಕೆ ಪ್ರಮಾಣ ಪತ್ರದೊಂದಿಗೆ ( Utilization Certificate) ಕಳುಹಿಸಿಕೊಡುವುದು.

ಜಿಲ್ಲಾ ಮಟ್ಟದ ಸ್ಪರ್ಧೆಗಳು:

ಜಿಲ್ಲಾ ಮಟ್ಟದ ಸ್ಪರ್ಧೆಗಳನ್ನು **ದಿನಾಂಕ 04/11/2019** ರಿಂದ **09/11/2019**ರ ವರೆಗೆ ನಡೆಸುವುದು. ಜಿಲ್ಲಾ ಮಟ್ಟದ ವಿಜೇತರ ಪಟ್ಟಿಯನ್ನು ಆಯಾ ವಿಭಾಗೀಯ ಮಟ್ಟದ ಸ್ಪರ್ಧೆಗಳಿಗಾಗಿ **ಬೆಂಗಳೂರು ವಿಭಾಗದವರು** ಉಪ ನಿರ್ದೇಶಕರು ತುಮಕೂರು ಜಿಲ್ಲೆ, ಮೈಸೂರು ವಿಭಾಗದವರು ಉಪ ನಿರ್ದೇಶಕರು ಚಿಕ್ಕಮಗಳೂರು ಜಿಲ್ಲೆ, ಗುಲ್ಬರ್ಗಾ ವಿಭಾಗದವರು ಉಪ ನಿರ್ದೇಶಕರು ಗುಲ್ಬರ್ಗಾ ಜಿಲ್ಲೆ, ಬೆಳಗಾವಿ ವಿಭಾಗದವರು ಉಪ ನಿರ್ದೇಶಕರು ವಿಜಾಪುರ ಜಿಲ್ಲೆ ಇವರ ವಿಳಾಸಗಳಿಗೆ **ದಿನಾಂಕ 26/11/2019**ರ ಒಳಗಾಗಿ ಕಳುಹಿಸುವುದು. ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ಹಾಗು ದ್ವಿತೀಯ ಸ್ಥಾನ ಪಡೆದು ವಿಜೇತರಾದ ವಿದ್ಯಾರ್ಥಿಗಳನ್ನು ವಿಭಾಗ ಮಟ್ಟದ ಸ್ಪರ್ಧೆ ನಡೆಯುವ ಸ್ಥಳಕ್ಕೆ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಮಾಡಿದ ಅಧಿಕೃತ ಮ್ಯಾನೇಜರ್ (ಉಪನ್ಯಾಸಕರು) ಒಬ್ಬ ಪುರುಷ ಹಾಗೂ ಒಬ್ಬ ಮಹಿಳಾ(ಇಬ್ಬರು ಮಾತ್ರ) ಉಪನ್ಯಾಸಕರ ಜೊತೆಯಲ್ಲಿ ಕಳುಹಿಸುವ ಏರ್ಪಾಡು ಮಾಡುವುದು. ವಿಭಾಗ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಚರ್ಚಾಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆ ವಿಷಯಗಳನ್ನು ತಿಳಿಸುವುದು.

ವಿಭಾಗ ಮಟ್ಟದ ಸ್ಪರ್ಧೆಗಳು:

ವಿಭಾಗೀಯ ಮಟ್ಟದ ಸ್ಪರ್ಧೆಗಳನ್ನು **ಬೆಂಗಳೂರು ವಿಭಾಗ ತುಮಕೂರು ಜಿಲ್ಲೆಯಲ್ಲಿ, ಮೈಸೂರು ವಿಭಾಗ ಚಿಕ್ಕಮಗಳೂರು ಜಿಲ್ಲೆಯಲ್ಲಿ, ಕಲಬುರಗಿ ವಿಭಾಗ ಕಲಬುರಗಿ ಜಿಲ್ಲೆಯಲ್ಲಿ, ಬೆಳಗಾವಿ ವಿಭಾಗ ವಿಜಾಪುರ ಜಿಲ್ಲೆಯಲ್ಲಿ** ನಡೆಸಲು ತೀರ್ಮಾನಿಸಲಾಗಿದೆ. ಈ ಜಿಲ್ಲೆಗಳ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು, ಪ್ರಾಂಶುಪಾಲರ ಸಂಘ ಹಾಗೂ ಉಪನ್ಯಾಸಕರ ಸಂಘದ ಸಹಕಾರದೊಂದಿಗೆ ಈ ಸ್ಪರ್ಧೆಗಳನ್ನು ನಡೆಸಲು ಕೋರಲಾಗಿದೆ. ವಿಭಾಗ ಮಟ್ಟದ ಸ್ಪರ್ಧೆಗಳನ್ನು ದಿನಾಂಕ **28/11/2019** ರಿಂದ **30/11/2019**ರ ಒಳಗಾಗಿ ನಡೆಸಲು ಸೂಚಿಸಲಾಗಿದೆ. ಜಿಲ್ಲಾ ಮಟ್ಟದ ಸ್ಪರ್ಧೆಗಳಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದ ವಿದ್ಯಾರ್ಥಿಗಳು ವಿಭಾಗ ಮಟ್ಟದಲ್ಲಿ ಪಾಲ್ಗೊಳ್ಳಲು ಅರ್ಹರಾಗಿರುತ್ತಾರೆ. ವಿಭಾಗೀಯ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳ ದಿನಾಂಕ, ಸಮಯ, ಸ್ಥಳ ಹಾಗೂ ಇನ್ನಿತರೆ ವಿವರಗಳನ್ನು ಸಂಬಂಧಪಟ್ಟ ವಿಭಾಗದಲ್ಲಿ ಈ ಕಾರ್ಯಕ್ರಮ ನಡೆಸುವ ಉಪ ನಿರ್ದೇಶಕರುಗಳು ತಮ್ಮ ವ್ಯಾಪ್ತಿಗೆ ಬರುವ ಉಳಿದ ಜಿಲ್ಲೆಗಳ ಉಪ ನಿರ್ದೇಶಕರುಗಳಿಗೆ ತಿಳಿಸುವುದು.

ವಿಭಾಗ ಮಟ್ಟದಲ್ಲಿ ಭಾಗವಹಿಸುವ ಸ್ಪರ್ಧಿಗಳ ಪ್ರಯಾಣ ವೆಚ್ಚವನ್ನು ಮಾತ್ರ ಸರ್ಕಾರಿ ಬಸ್ ದರದಲ್ಲಿ ಸಂಬಂಧಪಟ್ಟ ಆಯಾ ಕಾಲೇಜಿನ ಕ್ರೀಡೆ ಮತ್ತು ವಾಚನಾಲಯದ ನಿಧಿಯಿಂದ ಭರಿಸಲು ತಿಳಿಸುವುದು. ವಿಭಾಗ ಮಟ್ಟದಲ್ಲಿ ಭಾಗವಹಿಸುವ ಅಧಿಕೃತ ಮ್ಯಾನೇಜರ್‌ಗಳಿಗೆ ಪ್ರತಿ ಜಿಲ್ಲೆಯಿಂದ ಇಬ್ಬರಿಗೆ (ಒಬ್ಬ ಮಹಿಳೆ ಮತ್ತು ಒಬ್ಬ ಪುರುಷ) ಇಲಾಖೆಯಿಂದ ಪ್ರಯಾಣ ಭತ್ಯೆ/ದಿನ ಭತ್ಯೆಯನ್ನು ನೀಡುವುದು.

ಪ್ರತಿ ವಿಭಾಗದಲ್ಲಿ ಇರುವ ಜಿಲ್ಲೆಗಳ ವಿವರ.

| ಕ್ರಸಂ | ಬೆಂಗಳೂರು ವಿಭಾಗ | | ಮೈಸೂರು ವಿಭಾಗ | | ಬೆಳಗಾವಿ ವಿಭಾಗ | | ಗುಲ್ಬರ್ಗಾ ವಿಭಾಗ |
|---|---|---|---|---|---|---|---|
| 1 | ಬೆಂಗಳೂರು ದಕ್ಷಿಣ | 1 | ಮೈಸೂರು | 1 | ಬೆಳಗಾವಿ | 1 | ಗುಲ್ಬರ್ಗಾ |
| 2 | ಬೆಂಗಳೂರು ಉತ್ತರ | 2 | ಕೊಡಗು | 2 | ಹಾವೇರಿ | 2 | ರಾಯಚೂರು |
| 3 | ಬೆಂಗಳೂರು ಗ್ರಾಮಾಂತರ | 3 | ಹಾಸನ | 3 | ಧಾರವಾಡ | 3 | ಬಳ್ಳಾರಿ |
| 4 | ರಾಮನಗರ | 4 | ಮಂಡ್ಯ | 4 | ಗದಗ | 4 | ಬೀದರ್ |
| 5 | ಕೋಲಾರ | 5 | ದಕ್ಷಿಣ ಕನ್ನಡ | 5 | ಬಿಜಾಪುರ | 5 | ಕೊಪ್ಪಳ |
| 6 | ಚಿಕ್ಕಬಳ್ಳಾಪುರ | 6 | ಚಾಮರಾಜನಗರ | 6 | ಬಾಗಲಕೋಟೆ | 6 | ಯಾದಗಿರಿ |
| 7 | ತುಮಕೂರು | 7 | ಉಡುಪಿ | 7 | ಉತ್ತರಕನ್ನಡ | | |
| 8 | ಚಿತ್ರದುರ್ಗ | 8 | ಚಿಕ್ಕಮಗಳೂರು | 8 | ಚಿಕ್ಕೋಡಿ | | |
| 9 | ಶಿವಮೊಗ್ಗ | | | | | | |
| 10 | ದಾವಣಗೆರೆ | | | | | | |

ವಿಭಾಗೀಯ ಮಟ್ಟದಲ್ಲಿ ಈ ಕೆಳಕಂಡಂತೆ ಬಹುಮಾನಗಳನ್ನು ನಗದು ರೂಪದಲ್ಲಿ ನೀಡಲು ಸೂಚಿಸಿದೆ.

| | ಪ್ರಥಮ ಪಿಯುಸಿಗೆ | ದ್ವಿತೀಯ ಪಿಯುಸಿಗೆ | ಒಟ್ಟು |
|---|---|---|---|
| ಪ್ರಥಮ ಬಹುಮಾನ | 2500 x12 = 30,000/- | 2500 x12 = 30,000/- | 60,000/- |
| ದ್ವಿತೀಯ ಬಹುಮಾನ | 2000 x12 = 24.000/- | 2000 x12 = 24.000/- | 48,000/- |
| ತೃತೀಯ ಬಹುಮಾನ | 1500 x12 = 18,000/- | 1500 x12 = 18,000/- | 36,000/- |
| ಸಂಘಟನಾ ವೆಚ್ಚ | ಪ್ರತಿ ವಿಭಾಗಕ್ಕೆ 16,000/- | ---- | 16,000 |
| ಪ್ರಯಾಣ ಹಾಗೂ ದಿನಭತ್ಯೆಗಾಗಿ | ------ | ------ | 35,000/- |
| | | ಒಟ್ಟು | 1,95,000/- |

ಈ ರೀತಿಯಲ್ಲಿ 04 ವಿಭಾಗಗಳಿಗೆ ತಗಲುವ ವೆಚ್ಚ 1,95,000 x 04= 7,80,000/-

ವಿಭಾಗೀಯ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದ ಪ್ರಥಮ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಆ ವಿದ್ಯಾರ್ಥಿಗಳನ್ನು ರಾಜ್ಯ ಮಟ್ಟದ ಸ್ಪರ್ಧೆಗಳಿಗೆ ಕಳುಹಿಸಲು ಈ ಕಾರ್ಯಕ್ರಮಗಳನ್ನು ನಡೆಸಿಕೊಡುವ ಉಪ ನಿರ್ದೇಶಕರುಗಳು ಏರ್ಪಾಡು ಮಾಡಬೇಕು. ರಾಜ್ಯಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ಪ್ರಯಾಣ ಭತ್ಯೆಯನ್ನು ಮಾತ್ರ ಸರ್ಕಾರಿ ಬಸ್ ಪ್ರಯಾಣ ದರದಲ್ಲಿ ಕೊಡಲಾಗುವುದು. ದಿನಭತ್ಯೆಯನ್ನು ಇಲಾಖಾ ವತಿಯಿಂದ ಕೊಡಲಾಗುವುದಿಲ್ಲ. ದಿನಭತ್ಯೆಯನ್ನು ಸಂಬಂಧಪಟ್ಟ ಕಾಲೇಜಿನವರು ವಿದ್ಯಾರ್ಥಿಗಳಿಗೆ ಕೊಡಲು ಸೂಚಿಸುವುದು. ಈ ಹಣವನ್ನು ಕ್ರೀಡಾ ಮತ್ತು ವಾಚನಾಲಯ ನಿಧಿಯಿಂದ/ಸಾಂಸ್ಕೃತಿಕ ಚಟುವಟಿಕೆ ಹಣದಿಂದ ಉಪಯೋಗಿಸಿಕೊಳ್ಳುವುದು. ವಿದ್ಯಾರ್ಥಿಗಳ ಜೊತೆ ರಾಜ್ಯ ಮಟ್ಟದ ಸ್ಪರ್ಧೆಗೆ ಭಾಗವಹಿಸಲು ಇಬ್ಬರು ಉಪನ್ಯಾಸಕರನ್ನು (ಒಬ್ಬ ಮಹಿಳಾ ಉಪನ್ಯಾಸಕರು ಸೇರಿ) ನೇಮಿಸಿ ಅಧಿಕೃತ ಪತ್ರದೊಂದಿಗೆ ಕಳುಹಿಸುವುದು. ಚರ್ಚಾಸ್ಪರ್ಧೆ, ಪ್ರಬಂಧ ಸ್ಪರ್ಧೆಯ ವಿಜೇತರುಗಳಿಗೆ ರಾಜ್ಯ ಮಟ್ಟದಲ್ಲಿ ನಡೆಯುವ ಈ ಸ್ಪರ್ಧೆಗಳ ವಿಷಯಗಳನ್ನು ತಪ್ಪದೆ ತಿಳಿಸುವುದು.

ವಿಭಾಗ ಮಟ್ಟದ ಪ್ರತಿ ಸ್ಪರ್ಧೆಯಲ್ಲಿ ಪ್ರಥಮ ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದ ವಿಜೇತರ ಪಟ್ಟಿಯನ್ನು ಉಪ ನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಬಿ.ಪಿ ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-18 ಇವರಿಗೆ ವಿಭಾಗ ಮಟ್ಟದ ಸ್ಪರ್ಧೆಗಳು ನಡೆದ ಮಾರನೇ ದಿನವೇ ತ್ವರಿತ ಅಂಚೆ ಮೂಲಕ (ಸ್ಪೀಡ್ ಪೋಸ್ಟ್) ಕಳುಹಿಸುವುದು. ನಾಲ್ಕು ವಿಭಾಗಗಳಿಂದ ಮಾಹಿತಿ ಬರದಿದ್ದಲ್ಲಿ ರಾಜ್ಯ ಮಟ್ಟದ ಸ್ಪರ್ಧೆಗೆ ಪೂರ್ವ ತಯಾರಿ ಮಾಡಲು ತೊಂದರೆಯಾಗುತ್ತದೆ. ವಿಭಾಗೀಯ ಮಟ್ಟದ ಆಯವ್ಯಯ ಪಟ್ಟಿಯನ್ನು ಮೂಲ ರಶೀದಿಯನ್ನು ಜಿಲ್ಲೆಯಲ್ಲಿ ಕಾಯ್ದಿರಿಸಿಕೊಂಡು ದ್ವಿಪ್ರತಿಯನ್ನು ಬಳಕೆ ಪ್ರಮಾಣ ಪತ್ರದೊಂದಿಗೆ ( Utilization Certificate) ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ನೊಂದಣಿ ಅಂಚೆ ಮೂಲಕ ಸಹಾಯಕ ನಿರ್ದೇಶಕರು,(ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-560012 ಇವರಿಗೆ ತಪ್ಪದೆ ಕಳುಹಿಸಿಕೊಡುವುದು.

ಲಕೋಟೆಯ ಮೇಲೆ ವಿಭಾಗೀಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಆಯವ್ಯಯ ಪಟ್ಟಿ-2019 ಎಂದು ನಮೂದಿಸಿರಬೇಕು.

ವಿಭಾಗ ಮಟ್ಟದಲ್ಲಿ ನಡೆಯುವ ಸ್ಪರ್ಧೆಗಳ ವಿಷಯಗಳು

1. ಚರ್ಚಾ ಸ್ಪರ್ಧೆ:

ಅ. ಪ್ರಥಮ ಪಿಯುಸಿ: (ಕನ್ನಡ ಮಾಧ್ಯಮ) "ಸಾವಯವ ಬೇಸಾಯ ಪದ್ಧತಿ ಸಾಧಕಬಾಧಕಗಳು"

(ಇಂಗ್ಲೀಷ್ ಮಾಧ್ಯಮ) " Plastic ban-Environment Vs Economy"

ಆ. ದ್ವಿತೀಯ ಪಿಯುಸಿ: (ಕನ್ನಡ ಮಾಧ್ಯಮ) " ಅತಿಯಾದ ಕೈಗಾರಿಕರಣ ಪ್ರಸ್ತುತ ನಡೆಯುತ್ತಿರುವ ನೈಸರ್ಗಿಕ ಅವಗಡಗಳಿಗೆ ಕಾರಣವೇ"

(ಇಂಗ್ಲೀಷ್ ಮಾಧ್ಯಮ) " Bribing starts at home"

2. ಪ್ರಬಂಧ ಸ್ಪರ್ಧೆ:

ಅ. ಪ್ರಥಮ ಪಿಯುಸಿ: (ಕನ್ನಡ ಮಾಧ್ಯಮ) " ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಕ್ರೀಡಾ ಸಾಧನೆ"

(ಇಂಗ್ಲೀಷ್ ಮಾಧ್ಯಮ) "Digital India-a dream"

ಆ. ದ್ವಿತೀಯ ಪಿಯುಸಿ: (ಕನ್ನಡ ಮಾಧ್ಯಮ) " ತ್ಯಾಜ್ಯ ವಿಲೇವಾರಿ ನಮ್ಮೆಲ್ಲರ ಹೊಣೆ"

(ಇಂಗ್ಲೀಷ್ ಮಾಧ್ಯಮ) "Unpredictable climatic changes are the result of human greed"

ರಾಜ್ಯ ಮಟ್ಟದ ಸ್ಪರ್ಧೆಗಳು

ರಾಜ್ಯ ಮಟ್ಟದ ಸ್ಪರ್ಧೆಗಳನ್ನು ಪದವಿ ಪೂರ್ವ ಶಿಕ್ಷಣ ನಿರ್ದೇಶನಾಲಯದ ಮಾರ್ಗದರ್ಶನದಲ್ಲಿ ಉಪ ನಿರ್ದೇಶಕರು, ಬೆಂಗಳೂರು ದಕ್ಷಿಣ ಜಿಲ್ಲೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಬಿ.ಪಿ ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-18 ಇವರ ನೇತೃತ್ವದಲ್ಲಿ ಪ್ರಾಂಶುಪಾಲರ ಸಂಘ, ಉಪನ್ಯಾಸಕರ ಸಂಘ ಇವರ ಸಹಕಾರದೊಂದಿಗೆ ದಿನಾಂಕ: 14/12/2019ರಂದು ನಡೆಸಲು ನಿರ್ಧರಿಸಲಾಗಿದೆ. ಎಲ್ಲಾ ಸ್ಪರ್ಧೆಗಳು ಮುಗಿದ ನಂತರ ಆ ದಿನವೇ ನಡೆಯುವ ಮುಕ್ತಾಯ ಸಮಾರಂಭದಲ್ಲಿ ಬಹುಮಾನ ವಿತರಣೆ ಮಾಡಲಾಗುವುದು.

ರಾಜ್ಯ ಮಟ್ಟದ ಸ್ಪರ್ಧೆಗಳ ವಿಷಯಗಳು:

1. ಚರ್ಚಾ ಸ್ಪರ್ಧೆ:

ಅ. ಪ್ರಥಮ ಪಿಯುಸಿ: (ಕನ್ನಡ ಮಾಧ್ಯಮ) "ಮಳೆನೀರಿನಕೊಯ್ಲು ಪದ್ಧತಿಯಿಂದ ನೀರಿನ ಸಮಸ್ಯೆ ಬಗೆಹರಿಯುವುದೆ"

(ಇಂಗ್ಲೀಷ್ ಮಾಧ್ಯಮ) "Should celeberaties take responsibility of the products they endorse".

ಆ. ದ್ವಿತೀಯ ಪಿಯುಸಿ:(ಕನ್ನಡ ಮಾಧ್ಯಮ) "ಶಿಕ್ಷಣ ಕ್ರಮದಲ್ಲಿ ಆಗುತ್ತಿರುವ ಬದಲಾವಣೆಗಳು, ಗುಣಮಟ್ಟದ ಶಿಕ್ಷಣಕ್ಕೆ ಪೂರಕವಾಗಿದೆ"

(ಇಂಗ್ಲೀಷ್ ಮಾಧ್ಯಮ) "Does Social Media actually connect people"

2. ಪ್ರಬಂಧ ಸ್ಪರ್ಧೆ:

ಅ. ಪ್ರಥಮ ಪಿಯುಸಿ: (ಕನ್ನಡ ಮಾಧ್ಯಮ)"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ ಪರಿಸರವನ್ನು ಉಳಿಸಿ".

(ಇಂಗ್ಲೀಷ್ ಮಾಧ್ಯಮ) "Can robots replace manual efficiency"

ಆ. ದ್ವಿತೀಯ ಪಿಯುಸಿ (ಕನ್ನಡ ಮಾಧ್ಯಮ) "ಚಂದ್ರಯಾನ-2".

(ಇಂಗ್ಲೀಷ್ ಮಾಧ್ಯಮ) "Smart phones make people smarter"

ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಈ ಕೆಳಕಂಡಂತೆ ನಗದು ರೂಪದಲ್ಲಿ ಬಹುಮಾನ ನೀಡಲಾಗುವುದು. 11 ಸ್ಪರ್ಧೆಗಳು 12 ಬಹುಮಾನಗಳಿದ್ದು (ರಸಪ್ರಶ್ನೆ ಸ್ಪರ್ಧೆಯ ವಿಜೇತರನ್ನು ಒಳಗೊಂಡಂತೆ) ಪ್ರತಿ ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಇರುತ್ತದೆ.

ರಾಜ್ಯಮಟ್ಟದ ಸ್ಪರ್ಧೆಗೆ ಒಟ್ಟು ಬೇಕಾಗಿರುವ ಹಣ.

| | ಪ್ರಥಮ ಪಿಯುಸಿಗೆ | ದ್ವಿತೀಯ ಪಿಯುಸಿಗೆ | ಒಟ್ಟು |
|---|---|---|---|
| ಪ್ರಥಮ ಬಹುಮಾನ | 12,000 x12 = 1,44,000/- | 12,000 x12 = 1,44,000/- | 2,88,000/- |
| ದ್ವಿತೀಯ ಬಹುಮಾನ | 9000 x12 = 1,08,000/- | 9000 x12 = 1,08,000/- | 2,16,000/- |
| ತೃತೀಯ ಬಹುಮಾನ | 6000 x12 = 72,000/- | 6000 x12 = 72,000/- | 1,44,000/- |
| ಸಂಘಟನಾ ವೆಚ್ಚ | | | 1,00,000/- |
| ಪ್ರಯಾಣ ಭತ್ಯೆ (ಸ್ಪರ್ಧಾರ್ಥಿಗಳು ಹಾಗೂ ನಿಯೋಜಿತ ಉಪನ್ಯಾಸಕರಿಗಾಗಿ) | | | 1,75,000/- |
| | | ಒಟ್ಟು | 9,23,000/- |

ಘೋಷ್ವಾರೆ:

| | |
|---|---|
| ಜಿಲ್ಲಾ ಮಟ್ಟದ ಸ್ಪರ್ಧೆಗಳಿಗಾಗಿ | **30,84,800/-** |
| ವಿಭಾಗ ಮಟ್ಟದ ಸ್ಪರ್ಧೆಗಳಿಗಾಗಿ | **7,80,000/-** |
| ರಾಜ್ಯಮಟ್ಟದ ಸ್ಪರ್ಧೆಗಳಿಗಾಗಿ | 9,23,000/- |
| ಒಟ್ಟು | **47,87,800/-** |

(ನಲವತ್ತೇಳು ಲಕ್ಷದ ಎಂಭತ್ತೇಳು ಸಾವಿರದ ಎಂಟು ನೂರು ರೂಗಳು ಮಾತ್ರ)

ರಾಜ್ಯಮಟ್ಟದ ಸ್ಪರ್ಧೆಗಳಿಗಾಗಿ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು ಆವರಣ, ಬಿ.ಪಿ ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು-18 ಇವರಿಗೆ ರೂ 9,23,000/-ಗಳನ್ನು ಬಿಡುಗಡೆ ಮಾಡಲಾಗುವುದು. ರಾಜ್ಯ ಮಟ್ಟದ ಆಯವ್ಯಯ ಪಟ್ಟಿಯ ಮೂಲ ರಶೀದಿಯನ್ನು ಜಿಲ್ಲೆಯಲ್ಲೇ ಕಾಯ್ದಿರಿಸಿಕೊಂಡು ದ್ವಿಪ್ರತಿಯನ್ನು ಬಳಕೆ ಪ್ರಮಾಣ ಪತ್ರದೊಂದಿಗೆ ಕಾರ್ಯಕ್ರಮ ನಡೆದ 15 ದಿನಗಳೊಳಗಾಗಿ ನೊಂದಣಿ ಅಂಚೆ ಮೂಲಕ ಸಹಾಯಕ ನಿರ್ದೇಶಕರು, (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಂಗಳೂರು-560012 ಇವರಿಗೆ ತಪ್ಪದೆ ಕಳುಹಿಸಿಕೊಡುವುದು. ಲಕೋಟೆಯ ಮೇಲೆ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳ ಆಯವ್ಯಯ ಪಟ್ಟಿ-2019 ಎಂದು ನಮೂದಿಸಿರಬೇಕು.

ವಿವಿಧ ಹಂತಗಳಲ್ಲಿ ಸ್ಪರ್ಧೆಗಳನ್ನು ನಡೆಸುವವರಿಗೆ ವಿಶೇಷ ಸೂಚನೆ:

1. ಜಿಲ್ಲಾ ಮಟ್ಟದಲ್ಲಿ ಹಾಗೂ ವಿಭಾಗೀಯ ಮಟ್ಟದಲ್ಲಿ ರಸಪ್ರಶ್ನೆ ಕಾರ್ಯಕ್ರಮ ನಡೆಸುವಾಗ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಪ್ರಥಮ ಸುತ್ತಿನಲ್ಲಿ ಬರವಣಿಗೆ ಮುಖಾಂತರ (Written Test Master) ಸ್ಪರ್ಧೆಯನ್ನು ನಡೆಸಬಹುದೆಂದು ಸೂಚಿಸಿದೆ.

2. ಎರಡನೇ ಸುತ್ತಿನಲ್ಲಿ ಎಂಟು ತಂಡಗಳಿಗೆ ಮೌಖಿಕ Quiz ನಡೆಸಬೇಕು. ರಾಜ್ಯ ಮಟ್ಟದಲ್ಲಿ ರಸಪ್ರಶ್ನೆ ಸ್ಪರ್ಧೆಯನ್ನು ನಡೆಸುವಾಗ 4 ವಿಭಾಗಗಳಿಂದ ಬರುವ ಹನ್ನೆರಡು ತಂಡಗಳಿಗೆ ಒಟ್ಟು (24 ವಿದ್ಯಾರ್ಥಿಗಳು) ಮೊದಲು Written Test ನಡೆಸಬೇಕು. ತಂಡಗಳು ಪಡೆದಿರುವ ಅಂಕಗಳ ಆಧಾರದ ಮೇಲೆ ಮೊದಲ 8 ತಂಡಗಳನ್ನು (16 ವಿದ್ಯಾರ್ಥಿಗಳನ್ನು) ಆಯ್ಕೆ ಮಾಡುವುದು. (ನಾಲ್ಕು ತಂಡಗಳು Eliminate ಆಗುತ್ತವೆ)

3. ಈ ರೀತಿಯಲ್ಲಿ ಆಯ್ಕೆ ಮಾಡಿದ 8 ತಂಡಗಳಿಗೆ ಏಳು ಅಥವಾ ಎಂಟು ಸುತ್ತುಗಳ (ಮೌಖಿಕ) ಸ್ಪರ್ಧೆ ನಡೆಸುವುದು. ಇದರಲ್ಲಿ ಶ್ರವ್ಯ ದರ್ಶನ (Audio Visual) ಮುಂತಾದ ಸುತ್ತುಗಳಿರುತ್ತವೆ. ಪ್ರಶ್ನೆಗಳು,

ಇತಿಹಾಸ, ವಿಜ್ಞಾನ, ಸಾಹಿತ್ಯ, ಕ್ರೀಡಾ, Current affairs, ರಾಜಕೀಯ ಕರ್ನಾಟಕ ರಾಜ್ಯದ ಮುಂತಾದ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಜ್ಞಾನದ ಬಗ್ಗೆ ಇರುತ್ತವೆ.

- ರಾಜ್ಯ ಮಟ್ಟದ **Quiz** ನಡೆಸಿಕೊಡುವವರು ಜಿಲ್ಲಾ ಮಟ್ಟದಲ್ಲಾಗಲಿ, ವಿಭಾಗ ಮಟ್ಟದಲ್ಲಾಗಲಿ **Quiz Master** ಆಗಿ ಭಾಗವಹಿಸಿರಬಾರದು.
- ರಾಜ್ಯಮಟ್ಟದಲ್ಲಿ ಪ್ರಬಂಧ ಸ್ಪರ್ಧೆಗೆ ಒಂದು ಗಂಟೆ ಅವಧಿ ನೀಡಲಾಗುವುದು.
- ಭಾವಗೀತೆ, ಜಾನಪದಗೀತೆ ಮತ್ತು ಏಕಪಾತ್ರಾಭಿನಯ ಸ್ಪರ್ಧೆಗಳಲ್ಲಿ ಸಹ ಪ್ರತಿ ಸ್ಪರ್ಧೆಗೆ ಐದು ನಿಮಿಷಗಳ ಅವಕಾಶವಿರುತ್ತದೆ.
- ಏಕಪಾತ್ರಾಭಿನಯ ಸ್ಪರ್ಧೆಯಲ್ಲಿ 1ಕ್ಕಿಂತ ಹೆಚ್ಚು ಪಾತ್ರದಲ್ಲಿ ಅಭಿನಯಿಸಬೇಕು.

ಸಂಪೂರ್ಣ ಮಾಹಿತಿಯನ್ನು ವಿವಿಧ ಹಂತದಲ್ಲಿ ಸ್ಪರ್ಧೆಗಳನ್ನು ನಡೆಸುವ ಸಂಘಟಕರಿಗೆ ಉಪನಿರ್ದೇಶಕರು ತಿಳಿಸುವುದು. ಜಿಲ್ಲಾ, ವಿಭಾಗೀಯ ಮತ್ತು ರಾಜ್ಯ ಮಟ್ಟದಲ್ಲಿ ಸ್ಪರ್ಧೆಗಳನ್ನು ನಡೆಸುವಾಗ ಆಹ್ವಾನ ಪತ್ರಿಕೆ ಮತ್ತು ಪ್ರಶಸ್ತಿ ಪತ್ರಗಳನ್ನು ಸಿದ್ದಪಡಿಸುವಾಗ "ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ ಇವರ ಜಂಟಿ ಆಶ್ರಯದಲ್ಲಿ" ಎಂದು ಮುದ್ರಿಸುವುದು. ಆಹ್ವಾನ ಪತ್ರಿಕೆಯ ಒಂದು ಪ್ರತಿಯನ್ನು ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ನಿಧಿ, ಶಿಕ್ಷಕರ ಸದನ, ಕೆಂಪೇಗೌಡ ರಸ್ತೆ, ಬೆಂಗಳೂರು-1 ಇಲ್ಲಿಗೆ ತಪ್ಪದೆ ಕಳುಹಿಸುವುದು.

ಜಿಲ್ಲಾ ವಿಭಾಗ ಮತ್ತು ರಾಜ್ಯ ಮಟ್ಟದ ಸಾಂಸ್ಕೃತಿಕ ಪಠ್ಯೇತರ ಚಟುವಟಿಕೆಗಳ ಸ್ಪರ್ಧೆ ನಡೆಸಲು ಬಿಡುಗಡೆಯಾದ ಅನುದಾನದ ಬಳಕೆಗೆ ಸಂಬಂಧಿಸಿದಂತೆ, ಬಳಕೆ ಪ್ರಮಾಣ ಪತ್ರ ಮತ್ತು ಸ್ಪರ್ಧೆ ನಡೆಸಿರುವ ಕುರಿತು ತೆಗೆಯಲಾದ ಫೋಟೋಗಳನ್ನು ಕಡ್ಡಾಯವಾಗಿ ಖರ್ಚು ವೆಚ್ಚದ ವಿವರಗಳೊಂದಿಗೆ ಒಂದು ಪ್ರತಿಯನ್ನು ಜಂಟಿ ನಿರ್ದೇಶಕರು (ಶೈಕ್ಷಣಿಕ) ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012 ಇವರಿಗೆ ಕಳುಹಿಸುವುದು. ಸೂಕ್ತ ಕ್ರಮಗಳನ್ನು ತೆಗೆದುಕೊಂಡು ಜಿಲ್ಲಾ, ವಿಭಾಗ ಮತ್ತು ರಾಜ್ಯ ಮಟ್ಟದ ಸಾಂಸ್ಕೃತಿಕ ಪಠ್ಯೇತರ ಚಟುವಟಿಕೆಗಳ ಸ್ಪರ್ಧೆಯನ್ನು ಯಶಸ್ವಿಯಾಗಿ ನಡೆಸಲು ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ತಿಳಿಸಿದೆ.

ಸ್ಪರ್ಧೆಗಳು ನಡೆಯುವ ದಿನಾಂಕಗಳು:

| ಜಿಲ್ಲಾಮಟ್ಟದ ಸ್ಪರ್ಧೆಗಳು | ವಿಭಾಗಮಟ್ಟದ ಸ್ಪರ್ಧೆಗಳು | ರಾಜ್ಯಮಟ್ಟದ ಸ್ಪರ್ಧೆಗಳು |
|---|---|---|
| 04/11/2019ರಿಂದ 09/11/2019 | 28/11/2019ರಿಂದ 30/11/2019 | 14/12/2019 |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿ: ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

1. ಪದವಿ ಪೂರ್ವ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ- ಮುಂದಿನಕ್ರಮಕ್ಕಾಗಿ
2. ಜಂಟಿ ನಿರ್ದೇಶಕರು(ಪರೀಕ್ಷೆ/ಆಡಳಿತ/ಶೈಕ್ಷಣಿಕ/ಮಾನ್ಯತೆ) ಪದವಿ ಪೂರ್ವ ಶಿಕ್ಷಣ ಇಲಾಖೆ.
3. ನಿರ್ದೇಶಕರ ಆಪ್ತಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ.
4. ಲೆಕ್ಕ ಪತ್ರಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ-ಮಾಹಿತಿಗಾಗಿ.
5. ಇ-ಆಡಳಿತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರಿಗೆ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಇ-ಮೇಲ್‌ಗೆ ಅಳವಡಿಸಲು ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು
6. ಕಛೇರಿ ಪ್ರತಿ.